ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದವರಿಗೆ ಕೊಟ್ಟಿಲ್ಲ. ಪೂರ್ತಿ 471 ಸೀಟುಗಳನ್ನೂ ಕೂಡ ಎನ್‌ಆರ್‌ಐಗಳಿಗೆ ಅಂದರೆ ವಿದೇಶದಲ್ಲಿರುವಂಥ ವ್ಯಕ್ತಿಗಳಿಗೆ ಕೊಟ್ಟು 120 ಕೋಟಿ ರೂಪಾಯಿಗಳ ಹಗರಣವನ್ನು ಸರ್ಕಾರ ಮಾಡಿದೆ. ಆ ದೃಷ್ಟಿಯಿಂದ ಇದರ ಬಗ್ಗೆ ಮುಂದಿನ ವಿಚಾರಣೆಯಾಗಬೇಕಾಗಿರುವುದರಿಂದ ಸನ್ಮಾನ್ಯ ಸಚಿವರು ರಾಜೀನಾಮೆಯನ್ನು ಕೊಡಲೇಬೇಕು ಎಂದು ಕೇಳಿಕೊಳ್ಳುತ್ತೇನೆ.

4) ANNOUNCEMENT

MR. DEPUTY SPEAKER: I welcome Dr. B.Khan, Chairman and other hon.members of the Bihar Public Accounts Committee who are witnessing the proceedings of the House from the Speaker's gallery.

5) ನಿಯಮ 69ರ ಮೇರೆಗೆ ಚರ್ಚೆ:

ವಿಷಯ: ಎಂ.ಬಿ.ಬಿ.ಎಸ್. ಕೋರ್ಸಿಗೆ ಪೇಮೆಂಟ್ ಸೀಟ್‌ನಲ್ಲಿ ಆಗಿದೆ ಎನ್ನಲಾದ ಅವ್ಯವಹಾರದ ಬಗ್ಗೆ. (ಮುಂದುವರಿದ ಚರ್ಚೆ)

+ ಶ್ರೀ ಡಿ.ವಿ.ಸದಾನಂದಗೌಡ (ಪುತ್ತೂರು): ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚು ಮಾತನಾಡಲು ಇಷ್ಟಪಡುವುದಿಲ್ಲ. ಎರಡು ಪ್ರಮುಖವಾದ ವಿಚಾರಗಳನ್ನು ಮಾತ್ರ ಮಂಡನೆ ಮಾಡಲು ಇಷ್ಟಪಡುತ್ತೇನೆ. ನಾವು ನೇರವಾಗಿ ಸಚಿವರು ಮತ್ತು ಸರ್ಕಾರ ಇದಕ್ಕೆ ಜವಾಬ್ದಾರರು ಎಂದು ಏಕೆ ಹೇಳುತ್ತೇವೆ ಎಂದರೆ 1994ನೇ ಇಸವಿಯಲ್ಲಿ ಈ ಪ್ರಕರಣ ಪ್ರಾರಂಭವಾಗಿದ್ದರೂ ಸಹ 1994-95 ಮತ್ತು 1995-96ರಲ್ಲೂ ಇದು ಮುಂದುವರೆದಿದೆ. 1994-95ರಲ್ಲಿ ಬ್ಯಾಕ್‌ಲಾಗ್ ವೇಕೆನ್ಸಿ ಎಂದು ಸುಮಾರು 173 ಇಂಥ ಸೀಟುಗಳನ್ನು ಕೊಡಲಾಗಿದೆ. ಈ 173 ಸೀಟುಗಳನ್ನೂ 50 ಸಾವಿರ ಡಾಲರ್‌ಗಳನ್ನು ತೆಗೆದುಕೊಂಡು ಎನ್‌ಆರ್‌ಐ ನವರಿಗೆ ಕೊಟ್ಟಿದ್ದಾರೆ. 1995-96ರಲ್ಲಿ ಸುಮಾರು 143 ಜನರನ್ನು ಇದೇ ರೀತಿಯಲ್ಲಿ ತೆಗೆದುಕೊಂಡಿದ್ದಾರೆ. 1994ರಲ್ಲಿ ಈ ಪ್ರಕರಣದ ಬಗ್ಗೆ ಲೋಕಾಯುಕ್ತದಿಂದ ತನಿಖೆಯಾಗಬೇಕು ಎಂದು ನಾವು ಹೇಳಿದಾಗಲೂ, ಈ ಪ್ರಕರಣದಲ್ಲಿ ತಪ್ಪುಗಳಿವೆ ಎನ್ನುವ ವಿಚಾರವನ್ನು ಸ್ಪಷ್ಟವಾಗಿ ಸರ್ಕಾರದ ಗಮನಕ್ಕೆ ತಂದಾಗಲೂ ಕೂಡ ಸರ್ಕಾರ ಮತ್ತೆ ಅದನ್ನು ಮುಂದುವರೆಸಲು ಕಾರಣವೇನು? ಅದಕ್ಕೆ ಕಾರಣವಿಷ್ಟೇ, ಅದರಿಂದ ಸಿಗುವಂಥ ಮೊತ್ತವನ್ನು ತಮ್ಮ ರಾಜಕೀಯ ಲಾಭಕ್ಕಾಗಿ ಮತ್ತು ಚುನಾವಣಾ ವೆಚ್ಚಕ್ಕಾಗಿ ಇದನ್ನು ವಿನಿಯೋಗ ಮಾಡಿದ್ದಾರೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಅದಕ್ಕಾಗಿ ಇವತ್ತಿನ ಸರ್ಕಾರ ಮತ್ತು ಸಚಿವರು ರಾಜೀನಾಮೆ ಕೊಡಬೇಕು. ಇದರಲ್ಲಿ ಅನ್ಯಾಯವಾಗಿದೆ, ಇದು ಲೋಕಾಯುಕ್ತ ತನಿಖೆಯಾಗುತ್ತದೆ ಎನ್ನುವುದು ಗೊತ್ತಿದ್ದರೂ ಇದನ್ನು ಮುಂದುವರೆಸಿದ

ಕಾರಣ ಇವತ್ತು ಸಚಿವರು ಆ ಸ್ಥಾನದಲ್ಲಿ ಮುಂದುವರೆಯಲು ಅರ್ಹರಲ್ಲ. ಅವರು ಗೊತ್ತಿದ್ದೂ ಇದರಲ್ಲಿ ಶಾಮೀಲಾಗಿದ್ದಾರೆ ಎನ್ನುವ ನೇರ ಆರೋಪವನ್ನು ಮಾಡಲು ನಾವು ಇಚ್ಛೆಪಡುತ್ತಿದ್ದೇವೆ. ಆವತ್ತು ನೀವು ಲೋಕಾಯುಕ್ತದಲ್ಲಿ ಚಾರ್ಜ್ ಷೀಟ್ ಫೈಲ್ ಮಾಡುವಂಥ ಸಂದರ್ಭದಲ್ಲಿ ಏನು ಹೇಳಿದಿರಿ, ಅದನ್ನು ಬಿಟ್ಟು, ಅಪರಾಧ ಮಾಡಿದವರಿಗೆ ಪ್ರೊಮೋಷನ್ ಕೊಟ್ಟು ಉಪಕುಲಪತಿಗಳನ್ನಾಗಿ ಮಾಡಿದ್ದೀರಿ. ಇದರಲ್ಲಿ ಅವರನ್ನು ಬಿಟ್ಟುಬಿಡಲು ಕಾರಣವೇನು? ಆವತ್ತು ವಿಚಾರಣೆಯಲ್ಲಿ ಲೋಕಾಯುಕ್ತದ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಬಹಳ ಸ್ಪಷ್ಟವಾಗಿ ಹೇಳಿದ್ದಾರೆ, ರಾಜೀವ ಕೊಹ್ಲಿ ಎನ್ನುವ ಒಬ್ಬ ವಿದ್ಯಾರ್ಥಿ ರ್‍ಯಾಂಕ್ ನಂಬರ್ 4085-ಎ ಎಂದಾಗಿದ್ದರೂ ಕೂಡ 1692ನೇ ರ್‍ಯಾಂಕ್ ಎಂದು ಪರಿವರ್ತನೆ ಮಾಡಿದ್ದಾರೆ, ಎನ್ನುವಂಥಾದ್ದನ್ನು ಹೇಳಿದ್ದಾರೆ. ರಾಜೀವ್ ಕೊಹ್ಲಿ ಹೆಸರಿನಲ್ಲಿ ಮೂರನೇ ಕಾಲಂನಲ್ಲಿ ನಮೂದಿಸಬೇಕಾಗಿದ್ದಂಥ ರ್‍ಯಾಂಕನ್ನು ಬದಲಾವಣೆ ಮಾಡಿದ್ದು ಆ ಕಮಿಟಿಯ ಎಲ್ಲರಿಗೂ ಗೊತ್ತಿತ್ತು ಎನ್ನುವಂಥಾದ್ದನ್ನು ಲೋಕಾಯುಕ್ತದ ಇನ್ಸ್‌ಪೆಕ್ಷನ್ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಆವತ್ತಿನ ಎಸ್.ಪಿ.ಯವರು ಹೇಳಿದ್ದಾರೆ, ಇದು ಇವರಿಗೆ ಗೊತ್ತಿಲ್ಲವೇ? ಆ ಕಮಿಟಿಯಲ್ಲಿ ಡಾ: ಎಸ್.ಎ.ಕಾಂತಾರವರು ಇರಲಿಲ್ಲವೇ? ಅವರನ್ನು ಏಕೆ ಬಿಟ್ಟಿದ್ದೀರಿ? ಅವರಿಗೆ ಏಕೆ ಪ್ರಮೋಷನ್ ಕೊಟ್ಟು ವೈಸ್ ಛಾನ್ಸಲರ್ ಆಗಿ ಮಾಡಿದ್ದಾರೆ? ಇಲ್ಲಿ ಏನಾಗಿದೆ ಎಂದರೆ ಅವರ ಆರೋಪವನ್ನು ಮುಚ್ಚಿಟ್ಟು ಯಾರೋ ಒಬ್ಬ ಡಿವಿಜನ್ ಕ್ಲಾರ್ಕ್ ಮತ್ತು ಒಬ್ಬ ಡೆಪ್ಯೂಟಿ ಡೈರಕ್ಟರ್‌ರನ್ನು ಇದರಲ್ಲಿ ಶಾಮೀಲು ಮಾಡಿ ಇವರನ್ನು ಬಿಡುವಂತಹ ಪ್ರಯತ್ನವನ್ನು ಮಾಡಿದ್ದಾರೆ. ಎನ್‌ಕ್ವಾಯರಿ ರಿಪೋರ್ಟ್‌ನಲ್ಲಿ ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ. The Selection Scrutiny Committee has also wrongfully left these functions to be performed by doctors, Dr.Renukarya, Member Secretary, which enabled him to issue the impugned order information letters to the Medical College enabling Sri Rajiv Kohli to obtain admission by taking fake rank number for obtaining admission in connivance with the Members of the Selection Scrutiny Committee and others."

ಇದರಲ್ಲಿ ಏನು ಹೇಳಿದ್ದಾರೆಂದರೆ ಸೆಲಕ್ಷನ್ ಸ್ಕ್ರೂಟಿನಿ ಕಮಿಟಿಯವರು ರೆಸ್ಪಾನ್ಸಿಬಲ್ ಎಂದು ಇದರಲ್ಲಿ ಯಾರು ರ್‍ಯಾಂಕ್ ಅನ್ನು ವೆರಿಫೈ ಮಾಡಬೇಕಾಗಿತ್ತೋ ಆ ಸೆಲಕ್ಷನ್ ಸ್ಕ್ರೂಟಿನಿ ಕಮಿಟಿಯಲ್ಲಿದ್ದವರೇ ಈ ರ್‍ಯಾಂಕನ್ನು ವೆರಿಫೈ ಮಾಡಬೇಕೆಂದು ಗೊತ್ತಿದ್ದೂ ಕೂಡ ಇವತ್ತು ಡೆಪ್ಯೂಟಿ ಡೈರಕ್ಟರ್ ಮೇಲೆ ಮತ್ತು ಫಸ್ಟ್ ಡಿವಿಜನಲ್ ಕ್ಲಾರ್ಕ್ ಮೇಲೆ ಮಾತ್ರ ಆರೋಪ ಮಾಡಿ ನುಣಿಚಿಕೊಳ್ಳುವಂತಹ ಪ್ರಯತ್ನವನ್ನು ಮಾಡಿದ್ದಾರೆ.

ಇದರಲ್ಲಿ ಸರ್ಕಾರ ಕೂಡ ಶಾಮೀಲಾಗಿದೆ, ಇದು ಏಕೆ ಡಿಲೇಯಾಯಿತು. ಈಗ 5 ತಿಂಗಳುಗಳಿಂದ ಡಿಪಿಎಆರ್‌ನವರಿಗೆ ಲೋಕಾಯುಕ್ತದವರು ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ಹೇಳಿದರೂ ಕೂಡ ಏಕೆ ಆ್ಯಕ್ಷನ್ ತೆಗೆದುಕೊಳ್ಳಲಿಲ್ಲ. ಈ ಡಾ: ಕಾಂತಾರವರಿಗೆ ರಕ್ಷಣೆ ಕೊಡಬೇಕೆಂಬ ದೃಷ್ಟಿಯಿಂದ ಡಿಲೇ ಮಾಡಿದ್ದೀರಿ. ಇದನ್ನು ಪುನಃ ರಾಜ್ಯಪಾಲರಿಗೆ ಏಕೆ ಕಳುಹಿಸಿದ್ದೀರಿ ಎಂದರೆ ಇಲ್ಲಿಂದ ಇವರ ಜವಾಬ್ದಾರಿಯನ್ನು ತಪ್ಪಿಸಿ ರಾಜ್ಯಪಾಲರಲ್ಲಿ ಸ್ವಲ್ಪ ಸಮಯ ಇದನ್ನು ಪೆಂಡಿಂಗ್ ಇಡಬೇಕು. ಆ ಸಮಯದಲ್ಲಿ ಏನಾದರೂ ಕಾರಣವನ್ನು ಹುಡುಕಬಹುದೆಂಬ ಏಕಮೇವ ಉದ್ದೇಶದಿಂದ ನೀವು ಇದನ್ನು ರಾಜ್ಯಪಾಲರಿಗೆ ಕಳುಹಿಸಿದ್ದೀರಿ. ನಾನು ಕೇಳುವಂಥಾದ್ದು ಏನೆಂದರೆ ಲೋಕಾಯುಕ್ತದವರು ಏನು ಆ್ಯಕ್ಷನ್ ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ, ರಾಜ್ಯಪಾಲರಿಂದ ಪರ್ಮಿಷನ್ ಸಿಗಲಿಲ್ಲವೆಂದು ಡಿಲೆಯಾಯಿತೆಂದು ಇಟ್ಟುಕೊಳ್ಳೋಣ. ಇಲ್ಲಿ ಹೈಕೋರ್ಟ್ ಕೊಟ್ಟ ರೂಲಿಂಗ್ ಪ್ರಕಾರ ಇವರನ್ನು ಹಿಂಬಡ್ತಿ ಕೊಡಬೇಕೆಂಬ ವಿಚಾರವನ್ನು ಕೊಟ್ಟರೂ ಕೂಡ ಇದರ ಬಗ್ಗೆ ಇವರು ಏಕೆ ಗಮನ ಹರಿಸಲಿಲ್ಲ? ಇವತ್ತು ಯಾರನ್ನು ರಕ್ಷಣೆ ಮಾಡಬೇಕೆಂಬ ವ್ಯವಸ್ಥೆ ಇದೆ. ಹೈಕೋರ್ಟ್ ಜಡ್ಜ್‌ರವರು ಶ್ರೀ ಮಹೇಶ್ ಹೆಗಡೆ ಎನ್ನುವ ಸೆಕ್ಷನ್ ಜಡ್ಜ್‌ರವರು ಎನ್‌ಕ್ವಾಯರಿ ಮಾಡಿ ರಿಪೋರ್ಟ್ ಕೊಡಬೇಕೆಂದು ಹೇಳಿದರು. ಅವರು 27 ಪುಟಗಳ ಸುಧೀರ್ಘವಾದಂತಹ ರೆಕಾರ್ಡ್ ಮಾಡುವಂತಹ ಸಂದರ್ಭದಲ್ಲಿ ನೇರವಾಗಿ ಇದರಲ್ಲಿ ವಿಷಯವನ್ನು ಪ್ರಸ್ತಾಪ ಮಾಡಿ ತೋರಿಸಿದ್ದಾರೆ. ಇಲ್ಲಿ ಏನು ಎಂದರೆ ತಪ್ಪು ರ್ಯಾಂಕ್‌ಗಳನ್ನು ನಮೂದಿಸಿದ್ದು ಮಾತ್ರವಲ್ಲ. ಈ ತಪ್ಪುಗಳಿಗೆ ಸೆಲಕ್ಷನ್ ಕಮಿಟಿಯ ಎಲ್ಲಾ ನಾಲ್ಕು ಜನರು ಕೂಡ ಜವಾಬ್ದಾರರಾಗುತ್ತಾರೆ. ಇದರಲ್ಲಿ ಈಗ ಒಬ್ಬರು ತೀರಿಕೊಂಡಿದ್ದಾರೆ, ಅವರನ್ನು ಬಿಡಿ. ಆದರೆ ಈ ನಾಲ್ಕು ಜನರು ನೇರವಾಗಿ ಜವಾಬ್ದಾರರಾಗುತ್ತಾರೆ. ಈ ವಿಚಾರವಾಗಿ ಡಿಸ್ಟ್ರಿಕ್ಟ್ ಅಂಡ್ ಸೆಷನ್ ಜಡ್ಜ್‌ರವರ ಒಂದು ವರದಿ ಇದ್ದರೂ ಕೂಡ ಅವರನ್ನು ಬಿಟ್ಟು ಬಾಕಿ ಇಬ್ಬರ ಮೇಲೆ ಚಾರ್ಜ್ ಶೀಟ್ ಏಕೆ ಮಾಡಿದ್ದೀರಿ? ಒಂದು ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್.ಪಟೇಲ್‌ರವರು ಮಾನ್ಯ ರಾಮದಾಸ್‌ರವರು ಈ ಬಗ್ಗೆ ಸುದೀರ್ಘವಾಗಿ ಪ್ರಸ್ತಾಪ ಮಾಡಿದಂತಹ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಅದನ್ನು ಯಾರೂ ಮರೆತಿರುವುದಿಲ್ಲ, ಅದು ಈ ಸದನದ ಕಡತದಲ್ಲೂ ಇದೆ. ಅವರು ಏನು ಹೇಳಿದರೆಂದರೆ ಇದು ಅತ್ಯಂತ ಗಂಭೀರವಾದಂತಹ ವಿಚಾರವಾಗಿದೆ. ಇದರ ಬಗ್ಗೆ ಕೂಲಂಕುಷವಾಗಿ ತನಿಖೆಯಾಗಬೇಕು. ಇದರಲ್ಲಿ ಯಾರೇ ತಪ್ಪಿತಸ್ಥರು ಇದ್ದರೂ ಕೂಡ ಅವರ ಮೇಲೆ ನಾವು ಕ್ರಮ ಕೈಗೊಳ್ಳಬೇಕು. ಒಂದು ವೇಳೆ ಈ ಸದನದ ಯಾವುದೇ ಮಂತ್ರಿಗಳು ಅಂತಹ ಜವಾಬ್ದಾರಿಯುತವಾದಂತಹ ಸ್ಥಾನದಲ್ಲಿದ್ದು ಅದನ್ನು ಮುಚ್ಚಿಹಾಕುವಂತಹ ಪ್ರಯತ್ನವನ್ನು ಮಾಡಿದರೂ ಕೂಡ ಅವರು ರಾಜೀನಾಮೆಯನ್ನು ಕೊಡಬೇಕಾಗುತ್ತದೆ ಎಂದು ಹೇಳಿದ್ದಾರೆ. ಅದನ್ನು ನಾನು ಮತ್ತೊಮ್ಮೆ ಸನ್ಮಾನ್ಯ ಸಚಿವರಿಗೆ ಮನವರಿಕೆ ಮಾಡುವುದಕ್ಕೆ ಇಚ್ಛಿಸುತ್ತೇನೆ. ಇವತ್ತು ಈ ವಿಷಯ ಸದನದಲ್ಲಿ ಪ್ರಸ್ತಾಪ ಆದ ತಕ್ಷಣ

ಹೈಕೋರ್ಟ್‌ನಲ್ಲಿ ಇದರ ಬಗ್ಗೆ ರಿಟ್ ಪಿಟಿಷನ್ ಹಾಕಿ ಜಡ್ಜ್‌ಮೆಂಟ್ ಕೊಟ್ಟಮೇಲೆ ಮತ್ತೆ ಸುಪ್ರೀಂ ಕೋರ್ಟಿನ ತೀರ್ಮಾನವಾದ ಮೇಲೂ ಕೂಡ ಬಾಯಿ ಮುಚ್ಚಿಕೊಂಡು ಕುಳಿತುಕೊಳ್ಳಬೇಕಾದರೆ ಇದರ ಹಿನ್ನಲೆ ಏನು? ಬಹುಶಃ ಸಚಿವರೂ ಕೂಡ ಇದರಲ್ಲಿ ಶಾಮೀಲು ಆಗಿರಬೇಕೆಂಬ ಸಂದೇಹ ನಮ್ಮಲ್ಲೇ ಅಲ್ಲ, ಒಬ್ಬ ಸಾಮಾನ್ಯ ಮನುಷ್ಯರಲ್ಲೂ ಬರುವಂಥಾದ್ದು ಸ್ವಾಭಾವಿಕವಾಗಿದೆ. ಆದುದರಿಂದ ಈ ಹಿನ್ನಲೆಯಲ್ಲಿ ನಾವು ಸಚಿವರು ರಾಜೀನಾಮೆಯನ್ನು ನೀಡಬೇಕೆಂದು ಆಗ್ರಹ ಮಾಡುತ್ತಿದ್ದೇವೆ. ಆದುದರಿಂದ ಇವತ್ತು ನಾನು ಕೇಳುವಂಥಾದ್ದು ಇಷ್ಟೆ, ಪ್ರೆಸಿಡೆಂಟ್ ಆಫ್ ಇಂಡಿಯನ್ ಮೆಡಿಕಲ್ ಆಫ್ ಇಂಡಿಯಾ ಅವರಿಗೆ ಕಳುಹಿಸಿಕೊಟ್ಟಿದ್ದರು. ಅದರಲ್ಲೂ ಕೂಡ ನೇರವಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. "Private medical college managements have admitted large number of students over and above the intake fixed by the State Government. All these admissions have been done under the Management quota and they have been regularised by the then Director of Medical Education as backlog vacancies by an innovative concept conceived and perpetuated to defeat the guidelines isssued by the Unnikrishnan case." ಎನ್ನುವಂಥಾದ್ದನ್ನು ನೇರವಾಗಿ ತೋರಿಸಿಕೊಟ್ಟಿದ್ದರೂ ಕೂಡ ಇವರು ಮತ್ತೆ ಮಾಡುವುದಕ್ಕೆ ಕಾರಣವೇನು? ಇಲ್ಲಿ ಗೊತ್ತಿದ್ದೂ ಕೂಡ ತಪ್ಪು ಮಾಡುವಂತಹ ಪ್ರಯತ್ನವಾಗಿದೆ. ಈ ವಿಚಾರ ಸರ್ಕಾರಕ್ಕೆ ಬಂದಾಗಲೂ ಕೂಡ ಎನ್‌ಕ್ವಾಯರಿ ರಿಪೋರ್ಟ್‌ಗಳನ್ನು ಮುಚ್ಚಿ ಇಟ್ಟಿದ್ದಾರೆ. ಅವರು ಇವತ್ತು ಟೈಮ್ ಕೇಳುವುದಕ್ಕೆ ಕಾರಣವೇನು? ಇವತ್ತು ಮತ್ತೆ ಸದನದಲ್ಲಿ ವಿಷಯ ಪ್ರಸ್ತಾಪವಾಗಿದೆ. ಅಧ್ಯಕ್ಷರೂ ಸಹ ಇದು ಅತ್ಯಂತ ಗಂಭೀರವಾದಂತಹ ವಿಚಾರವೆಂದು ಇದನ್ನು ನಿಯಮ 69ರ ಅಡಿಯಲ್ಲಿ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಆದ ಕಾರಣ ಇದಕ್ಕೆ ಇನ್ನು ಒಂದೆರಡು ದಿವಸಗಳ ಕಾಲಾವಕಾಶವನ್ನು ಕೊಟ್ಟರೆ ಇದಕ್ಕೆ ಸಂಬಂಧಪಟ್ಟ ಕಡತ ಮಾನ್ಯ ಮುಖ್ಯಮಂತ್ರಿಯವರ ಕಚೇರಿಯಲ್ಲಿದೆ. ಈ ಕಡತವನ್ನು ಹೆಚ್ಚು ಕಡಿಮೆ ಮಾಡಬಹುದೆಂಬ ದುರಾಲೋಚನೆ ಇವರಲ್ಲಿ ಇರಲಿಕ್ಕೆ ಇಲ್ಲ ಎಂದು ನಾನು ಭಾವಿಸುವುದಿಲ್ಲ. ಇದಕ್ಕಾಗಿ ಮತ್ತೆ ಸಮಯವನ್ನು ಕೇಳುವಂತಹ ಪ್ರಯತ್ನವನ್ನು ಮಾಡುತ್ತಿದ್ದಾರೆ. ಆ ಕಡತಗಳು ಯಾವುದು ಅದನ್ನು ಸದನದ ಮುಂದೆ ತಕ್ಷಣ ಇಡಲಿ. ಇದನ್ನು ಅವರು ಸದನದ ಮುಂದಿಡಲು ಏಕೆ ಆಗುತ್ತಿಲ್ಲ? ಲೋಕಾಯುಕ್ತದವರು ಕೊಟ್ಟಂತಹ ವಿಚಾರಗಳಲ್ಲಿ ಕೂಡ ಇವರು ಏನೂ ಸ್ಪಷ್ಟವಾಗಿ ವಿಚಾರ ಮಾಡಲಿಲ್ಲ. ಇನ್ನು ಒಂದು ಮಹತ್ವವಾದಂತಹ ವಿಚಾರವಿದೆ. ಇವತ್ತು ಅಲ್ಲಿ 471 ವಿದ್ಯಾರ್ಥಿಗಳು ಇದ್ದಾರೆ. ಅವರು ಡಾಕ್ಟರ್‌ಗಳಾಗಬೇಕೆಂದು ಬೇರೆ ಬೇರೆಯ ಆಸೆಯಿಂದ ಬಂದಿದ್ದಾರೆ. ಇವತ್ತು ಅಲ್ಲಿ 50 ಸಾವಿರ ಅಮೇರಿಕಾ ಡಾಲರ್‌ಗಳನ್ನೇ ತೆಗೆದುಕೊಂಡಿದ್ದಾರೆಂಬುದು

ನಮ್ಮ ಗಮನಕ್ಕೆ ಬಂದಿದೆ. ಈ ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗಿದೆ ಎಂದರೆ ನಾಳೆ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ಗೆ ಬೇಕಾದಂತಹ ಅಪ್ರೂವಲ್ ಸಿಗದಿದ್ದರೆ ಅವರಿಗೆ ಡಿಗ್ರಿ ಸಿಗುವಂತಹ ಪರಿಸ್ಥಿತಿಯೂ ಇಲ್ಲ. ಈ ರೀತಿಯಲ್ಲಿ ಸೀಟು ಹಗರಣದಲ್ಲಿ ಶಾಮೀಲು ಆಗಿರುವುದರ ಜೊತೆಗೆ ನೂರಾರು ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಆಟವಾಡುತ್ತಾರಲ್ಲಾ, ತಾವು ಇದರ ಬಗ್ಗೆ ಚಿಂತನೆ ಮಾಡಬಾರದೆ? ಆದುದರಿಂದ ಇದರ ಬಗ್ಗೆ ಸ್ಪಷ್ಟವಾಗಿ ವಿಚಾರವಾಗಬೇಕು. ಇಲ್ಲಿ ಡಾ।। ಕಾಂತರವರನ್ನು ಬಿಟ್ಟಿದ್ದು ಸರಿಯಲ್ಲ. ಲೋಕಾಯುಕ್ತದಲ್ಲಿ ತನಿಖೆಯಾದ ಮೇಲೆ ಇವರ ಮೇಲೆ ಕೇಸ್ ಹಾಕಬೇಕು. ಅವರನ್ನು ತಕ್ಷಣ ಸಸ್ಪೆನ್ಷನ್‌ನಲ್ಲಿಡಬೇಕು. ಅವರು ಯಾವುದೇ ಸ್ಥಾನದಲ್ಲಿರಲಿ, ಆ ಸ್ಥಾನದಿಂದ ಅವರನ್ನು ಸಸ್ಪೆನ್‌ಷನ್‌ನಲ್ಲಿಟ್ಟು ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳುವಂತಹ ಪ್ರಯತ್ನ ಮಾಡಬೇಕು. ಇವರು ಎನ್.ಆರ್.ಐ ಡೊನೇಷನ್ ಅನ್ನು ತೆಗೆದುಕೊಂಡಿದ್ದಾರೆ ಇದೂ ಸಹ FERA violation ಆಗುತ್ತದೆ. ಮಾನ್ಯ ಅಧ್ಯಕ್ಷರೆ, ಇದು ತಮಗೂ ಗೊತ್ತಿದೆ. ಫೆರಾ ಕೇಸ್‌ಗಳು ಸಾವಿರಾರು ದಾಖಲು ಆಗಿವೆ. ಈ ಐವತ್ತು ಸಾವಿರ ಅಮೇರಿಕಾ ಡಾಲರ್‌ಗಳನ್ನು ವಿದ್ಯಾರ್ಥಿಗಳಿಂದ ತೆಗೆದುಕೊಂಡು ಫೆರಾ ಕಾಯಿದೆಯನ್ನು ಉಲ್ಲಂಘನೆ ಮಾಡಿದ ಹಾಗೆ ಆಗುತ್ತದೆ. ಇಷ್ಟು ಗಂಭೀರವಾದಂತಹ ವಿಚಾರವಿರುವ ಹಿನ್ನಲೆಯಲ್ಲಿ ಯಾರು ಅಧಿಕಾರಿಗಳ ಮೇಲೆ ದೋಷಾರೋಪಣೆಯ ಪಟ್ಟಿಯನ್ನು ಸಲ್ಲಿಸಿದ್ದಾರೆ. ಅವರ ಮೇಲೆ ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ಆಗಿದೆ. ಅದರಲ್ಲಿ ಡಾ: ಎಸ್.ಕಾಂತಾರವರನ್ನೂ ಕೂಡ ಸಸ್ಪೆನ್ಷನ್‌ನಲ್ಲಿ ಇಡಬೇಕು, ಮತ್ತೆ ನೈತಿಕ ಹೊಣೆ ಹೊತ್ತು ಮಾನ್ಯ ಮಂತ್ರಿಯವರು ರಾಜೀನಾಮೆಯನ್ನು ಕೊಡಬೇಕೆಂದು ಈ ಸದನದಲ್ಲಿ ತಮ್ಮ ಮೂಲಕ ತಿಳಿಸಲಿಚ್ಛಿಸುತ್ತೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಅಧ್ಯಕ್ಷರೆ, ಇದು ಶುರುವಾದದ್ದು ಇಂದಿನಿಂದ ಅಲ್ಲ, 1983ನೇ ಇಸವಿಯಿಂದಲೇ ಶುರುವಾಗಿದೆ. ಆಗ ಯಾರು ಆರೋಗ್ಯ ಮಂತ್ರಿಗಳಾಗಿದ್ದರೋ ಗೊತ್ತಿಲ್ಲ. ಆದರೆ 1983ನೇ ಇಸವಿಯಲ್ಲಿ ಎಕ್ಸಸ್ ಅಡ್‌ಮಿಷನ್ ಎಸ್‌ಆರ್‌ಐ ಖೋಟ ಶುರುವಾಯಿತು. ಇದು ಗುಲ್ಬರ್ಗಾದಲ್ಲಿ ಎಕ್ಸಸ್ ಕೋಟಾ ಸನ್ಮಾನ್ಯ ಜವಳಿಯವರು ಮಾಡಿದರೆಂದು ಎನ್‌ಕ್ವಾಯರಿಯಾಗಿ ಛಾರ್ಜ್ ಶೀಟ್ ಹಾಕಿದ್ದಾರೆ. ಹೀಗೆ ಇದು ಮುಂದುವರೆದುಕೊಂಡು ಬಂತು, ಈ ರೀತಿಯಾಗಿ ಬಂದರೂ ಕೂಡ ಯಾರೂ ಇದರ ಬಗ್ಗೆ ಕಣ್ಣೆತ್ತಿ ನೋಡಲಿಲ್ಲ. ಇದನ್ನು ಪ್ರಪ್ರಥಮವಾಗಿ ಮಾನ್ಯ ವೀರಪ್ಪಮೊಯಿಲಿಯವರ ಕಾಲದಲ್ಲಿ ಅವರ ಗಮನಕ್ಕೆ ಬಂದಾಗ ತಕ್ಷಣ ಇದರ ಬಗ್ಗೆ ಎನ್‌ಕ್ವಾಯರಿಗೆ ಆರ್ಡರ್ ಮಾಡಿದರು, ಅಷ್ಟೇ ಅಲ್ಲ ಎಫ್.ಐ.ಆರ್. ಕಂಪ್ಲೇಂಟ್ ನಾಲ್ಕು ಜನರ ಮೇಲೆ ಕೇಸ್ ಹಾಕಿದರು. ಈ ನಾಲ್ಕು ಜನರಲ್ಲಿ ಇಬ್ಬರನ್ನು ಕಾರಣಾಂತರದಿಂದ ಛಾರ್ಜ್‌ಶೀಟ್‌ನಿಂದ ತೆಗೆದುಹಾಕಿದರು. ಅವರನ್ನು ಏಕೆ ತೆಗೆದಿರಿ, ಸತ್ತರವರ ಮೇಲೆ ಚಾರ್ಜ್‌ಶೀಟ್‌ನಿಂದ ತೆಗೆಯುವಂಥಾದ್ದು

ಬೇರೆ ವಿಷಯವಾಗುತ್ತದೆ. ಇದಕ್ಕೆ ಯಾರು ಕಾರಣವೆಂದು ಗೊತ್ತಿಲ್ಲ. ಆದರೆ ಡಾ: ಕಾಂತಾರವರ ಮೇಲೆ ಇರುವಂತಹ ಛಾರ್ಜ್ ಶೀಟ್ ಅನ್ನು ಕೈ ಬಿಡಲಾಯಿತು. ಇನ್ನು ಇಬ್ಬರು ಬಡಪಾಯಿಗಳು ಫಸ್ಟ್ ಡಿವಿಜನ್ ಕ್ಲಾರ್ಕ್ ಮತ್ತು ಡೆಪ್ಯೂಟಿ ಡೈರಕ್ಟ್ ಯಾರಿದ್ದಾರೆ, ಅವರ ಮೇಲೆ ಚಾರ್ಜ್‌ಶೀಟ್ ಹಾಕಿದರು. ಅವರ ಮೇಲೆ ಏಕೆ ಹಾಕಿದರೆಂದು ಗೊತ್ತಿಲ್ಲ. ಇಲ್ಲಿ ಹುಡುಗರು ಯಾರು ಅಡ್‌ಮಿಷನ್ ತೆಗೆದುಕೊಂಡಿದ್ದರು ಅವರು ಸುಪ್ರೀಂ ಕೋರ್ಟಿಗೆ ನಮ್ಮನ್ನು ವಿಚಾರಣೆ ಮಾಡದೇ ಅಡ್‌ಮಿಷನ್ ಕ್ಯಾನ್ಸಲ್ ಮಾಡಿದ್ದಾರೆ ಏನಾದರೂ ಮಾಡಬೇಕೆಂದು ಸುಪ್ರೀಂ ಕೋರ್ಟಿಗೆ ಹೋದರು. ಅಲ್ಲಿ ವಿಚಾರಣೆಗೆ ಬಂತು, ಆಗ ಯಾರಾದರೂ ಒಬ್ಬ ಜಡ್ಜ್‌ರವರ ಮುಖಾಂತರ ಇದನ್ನು ತನಿಖೆ ಮಾಡಿಸಿ let that submission be made before the High Court ಎಂದು ಸುಪ್ರೀಂ ಕೋರ್ಟ್‌ನಲ್ಲಿ ಹೇಳಿದರು. ಅದಾದನಂತರ ಹೈಕೋರ್ಟ್‌ನಲ್ಲಿ ಬಂದು ಅದನ್ನು ಸಬ್‌ಮಿಷನ್ ಮಾಡಿ ಇದಕ್ಕೆ ಸುಪ್ರೀಂಕೋರ್ಟ್ ಆದೇಶವಾಗಿದೆ, ರೆಪ್ರಸೆಂಟೇಷನ್ ಕೊಟ್ಟಿದ್ದಾರೆ. ಯಾರನ್ನಾದರೂ ಡಿಸ್ಟ್ರಿಕ್ಟ್ ಜಡ್ಜ್ ಅನ್ನು ಅಪಾಯಿಂಟ್ ಮಾಡಿ ಎಂದು ಸ್ಟೂಡೆಂಟ್ಸ್ ಕೇಳಿಕೊಂಡರು. ಅವರು ಈ ರೀತಿಯಾಗಿ ಕೇಳಿಕೊಂಡಾಗ ಶ್ರೀ ಮಹೇಶ್ ಹೆಗಡೆಯವರನ್ನು ಎನ್‌ಕ್ವಾಯರಿ ಮಾಡಿ ರಿಪೋರ್ಟ್ ಪಬ್ಲಿಷ್ ಮಾಡಿ ಎಂದು ಹೈಕೋರ್ಟ್ ಆರ್ಡರ್ ಮಾಡಿತು. ಹೈಕೋರ್ಟ್ ಆರ್ಡರ್ ಮಾಡಿದ ಮೇಲೆ ಡಿಸ್ಟ್ರಿಕ್ಟ್ ಜಡ್ಜ್ ಎನ್‌ಕ್ವಾಯರಿ ಮಾಡಿದರು. ಇದಕ್ಕೆ ಸಂಬಂಧಪಟ್ಟಂತಹ ಎಲ್ಲಾ ವ್ಯಕ್ತಿಗಳನ್ನು ವಿಚಾರಣೆ ಮಾಡಿದ್ದಾರೆ. ಇದರ ಕಡತಗಳು ಏನೇನು ಇದೆ, ಎಲ್ಲವನ್ನೂ ಪರಿಶೀಲನೆ ಮಾಡಿ ಇದಕ್ಕೆ ಸಂಬಂಧಪಟ್ಟಂತಹ ವ್ಯಕ್ತಿಗಳನ್ನು ವಿಚಾರಣೆ ಮಾಡಿ ಒಂದು ವರದಿಯನ್ನು ಕೊಟ್ಟರು. ಇಲ್ಲಿ ಪಬ್ಲಿಕ್ ಅನ್ನೂ ಕೂಡ ಹೇಗೆ ಮಿಸ್ ಲೀಡ್ ಮಾಡಿದ್ದಾರೆನ್ನುವುದು ಮೊದಲ ವರದಿಯಲ್ಲಿ ಶ್ರೀ ಮಹೇಶ್ ಹೆಗಡೆಯವರು ಕೊಟ್ಟಿದ್ದಾರೆ. "The general merit list of all successful candidates was not published in the newspapers as required under Rule 9 of the Rules but the same was published at the Nodal Centre, Directorate of Medical Education and Technical Education." ಅಂದರೆ, ಇವರು ಏನು ಮೋಸ ಮಾಡಿದ್ದಾರೆನ್ನುವುದು ಸಾರ್ವಜನಿಕರಿಗೆ ಗೊತ್ತಾಗಬಾರದೆಂದು ರೂಲ್ 9ನ್ನು ಉಲ್ಲಂಘನೆ ಮಾಡಿ ಪ್ರಕಟಿಸಲಿಲ್ಲ. ಎರಡನೆಯದು, "Select List No.1 & 2 were published in the newspapers with the details of admission Ticket No., College codes etc., and the petitioners were not among the candidates selected in these two lists." ಅಂದರೆ ಪ್ರಕಟಿಸಿದ ಪಟ್ಟಿಯಲ್ಲೂ ಕೂಡ ಯಾವ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಸೀಟು ಕೊಟ್ಟರಲ್ಲಾ, ಅವರ ಹೆಸರು, ಕೋಡ್ ನಂಬರ್

ಇರಲಿಲ್ಲ. ನ್ಯೂಸ್ ಪೇಪರ್‌ನಲ್ಲಿ ಯಾವ ರೀತಿ ಪ್ರಕಟಿಸಬೇಕು ಆ ರೀತಿ ಮಾಡಲಿಲ್ಲ. ಯಾವ ಆಯ್ಕೆಯಾದ ಅಭಿವೃದ್ದಿಗಳನ್ನು ಪ್ರಕಟಿಸಿದರಲ್ಲಾ ಅದರಲ್ಲಿ ಇವರ ಹೆಸರಿರಲಿಲ್ಲ. ಮಾರನೆಯದು, "These rankings claimed by the petitioners while securing admissions were not there and that the rankings actually secured by them were much lower than the rankings claimed by them and there is no dispute in this regard." ಅವರು ಅಪ್ಲಿಕೇಷನ್‌ನಲ್ಲಿ ಕೊಟ್ಟಿದ್ದ ರ್‍ಯಾಂಕಿಂಗ್ ಅವರದಲ್ಲವೇ ಅಲ್ಲ, ಇದರ ಬಗ್ಗೆ ವಿವಾದವೇ ಇಲ್ಲ ಎನ್ನುವುದು ಮಾರನೆಯ ಬೈಂಡಿಂಗ್. "The petitioners secured admission by furnishing incorrect rankings in collusion with the SSC." ಆಯ್ಕೆ ಸಮಿತಿಯವರ ಕೊಲ್ಯುಷನಲ್ಲಿ ಇವರಿಗೆ ಪ್ರವೇಶ ಸಿಕ್ಕಿತು ಎನ್ನುವುದು ನಾಲ್ಕನೆ ಬೈಂಡಿಂಗ್. ಐದನೆಯದು, "All the petitioners were eligible to be selected during spot selection. Sixth, Members of SSc, including the Chairman who are equally guilty if not more, have been promoted." ಯಾರು ಕಲ್ಪಿಟ್ಸ್ ಇದ್ದಾರೆ ಅವರನ್ನು ಪ್ರೊಮೋಟ್ ಮಾಡಿದ್ದಾರೆನ್ನುವುದು ಆರನೆ ಬೈಂಡಿಂಗ್. ಇದಾದ ನಂತರ ಇವರು ಸುಪ್ರೀಂ ಕೋರ್ಟಿಗೆ ಹೋದರು. ಸುಪ್ರೀಂ ಕೋರ್ಟ್‌ನಲ್ಲಿನ ಈ ಮಹೇಶ್ ಹೆಗ್ಡೆಯವರ ಬೈಂಡಿಂಗ್ ಅನ್ನು ಹೈಕೋರ್ಟ್ ಕೂಡ ಒಪ್ಪಿಕೊಂಡರು. ಸುಪ್ರೀಂ ಕೋರ್ಟ್‌ಗೆ ಹೋದಾಗ ಹಿರಿಯ ವಕೀಲರಾದ ಸನ್ಮಾನ್ಯ ವೇಣುಗೋಪಾಲ್‌ರವರು ಆರ್ಗ್ಯುಮೆಂಟ್ ಮಾಡುತ್ತಾ, ನಮ್ಮ ವಿದ್ಯಾರ್ಥಿಗಳಿಗೆ ಮಾತ್ರ ಕ್ಯಾನ್ಸಲ್ ಮಾಡಿಬಿಟ್ಟಿದ್ದಾರೆ, ಸರ್ಕಾರ ಈ ಅಧಿಕಾರಿಗಳ ಮೇಲು ಕೂಡ ಏನೂ ಕ್ರಮ ತೆಗೆದುಕೊಂಡಿಲ್ಲ ನಾವು ಏತಕ್ಕೆ ಗಿಲ್ಟಿಯಾಗಬೇಕು, ಒಂದು ಕಡೆ ಬೆಣ್ಣೆ, ಒಂದು ಕಡೆ ಸುಣ್ಣ ಹಾಕುವುದು ನ್ಯಾಯವಲ್ಲವೆಂದು ಹೇಳಿದರು. ಅವರು ಏನು ಹೇಳಿದರೆಂದರೆ, "The aforesaid conclusions show that incorrect ranking had been mentioned and admission had been secured in collusion with the Members of the SSC. Another important finding is that all the Appellants were eligible to be selected on the basis of thier rankings." ಅಂದರೆ, ನ್ಯಾಯವಾಗಿ ಅವರ ಸೆಲೆಕ್ಷನ್ ಸ್ಪಾಟ್ ಇನ್‌ಸ್ಪೆಕ್ಷನ್ ಆಗಬೇಕಾಗಿತ್ತು ಆದರೆ ಅವರಿಗೆ ಆಗಿಲ್ಲ. ಇನ್ ಕರೆಕ್ಟ್ ಫೈಂಡಿಂಗ್ಸ್ ಕೊಟ್ಟು ಸೆಲೆಕ್ಷನ್ ಮಾಡಿದ್ದರಿಂದ ಅವರದು ಕ್ಯಾನ್ಸಲ್ ಆಗಿತ್ತು; ಇವೆರಡನ್ನು ಮುಂದೆ ಇಟ್ಟರು. ಮತ್ತೊಂದು ಆರ್ಗ್ಯುಮೆಂಟ್ ಮಾಡಿದರು, ಅದಕ್ಕೆ ವೇಣುಗೋಪಾಲ್‌ರವರು ಏನು ಹೇಳಿದರೆಂದರೆ, "The Appellants state that the State may not be allowed to blow hot and cold

in as much as the members of the then SSC who colluded with the Appellants having been even promoted, it does not lie in the mouth of the State and its concerned officer to demand punishment of the Appellants alone." ವಿದ್ಯಾರ್ಥಿಗಳಿಗೆ ಮಾತ್ರ ದಂಡನೆಯಾಗುವುದಿಲ್ಲವೆಂದು ಹೇಳಿದರು. ಸುಪ್ರೀಂಕೋರ್ಟಿನಲ್ಲಿ ಸ್ಟೇಟ್ ಕೌನ್ಸಿಲ್ ನಾಗರಾಜ್‌ರವರನ್ನು ಇದಕ್ಕೆ ನಿಮ್ಮ ಉತ್ತರವೇನೆಂದು ಕೇಳಿದರು. "On the State counsel being asked by us (Supreme Court Judges) as to whether the State is prepared to restore the status quo ante regarding the posts which the concerned members of the SSC were holding at that time, cold shouldered his shore." ಇವರನ್ನು ವೈಚಾನ್ಸಲರ್ ಮಾಡಿದ್ದೀರಿ, ಡೈರೆಕ್ಟರ್‌ನ್ನಾಗಿ ಮಾಡಿದ್ದೀರಿ, ಇವರು ಮೊದಲು ಯಾವ ಸ್ಥಾನದಲ್ಲಿದ್ದರೋ ಆ ಸ್ಥಾನಕ್ಕೆ ರಿವರ್ಟ್ ಮಾಡುವುದಕ್ಕೆ ನೀವು ತಯಾರಿದ್ದೀರಾ ಎಂದು ಸುಪ್ರೀಂಕೋರ್ಟ್‌ನವರು ಅವರನ್ನು ಪ್ರಶ್ನಿಸಿದಾಗ, "cold shouldered his shore" Who? Your representative. State government advocate was not ready. He says, No. ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದಾಗ, ಆ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಏನು ಹೇಳುತ್ತದೆಂದರೆ, Sri Nagaraja, representative of our Government states that the officers cannot be punished without giving them an opportunity. ಅವರಿಗೆ ಅವಕಾಶ ಕೊಡದೆ ಶಿಕ್ಷಿಸುವುದಕ್ಕೆ ಬರುವುದಿಲ್ಲವೆಂದರು. "It is really not a question of punishment to them (Supreme Court finding) But of taking back the reward given." ಅದು ಅವರ ಶಿಕ್ಷೆಯ ಪ್ರಶ್ನೆಯಲ್ಲ, ಈ ಕೆಟ್ಟ ಕೆಲಸ ಮಾಡಿದ್ದಕ್ಕೆ ಏನು ಬಹುಮಾನ ಕೊಟ್ಟಿದ್ದೀರಿ ಅದನ್ನು ವಾಪಸ್ ತೆಗೆದುಕೊಳ್ಳಬೇಕು, ಅದಕ್ಕೆ ಎನ್‌ಕ್ವೈರಿ ಪ್ರಶ್ನೆ ಬರುವುದಿಲ್ಲವೆಂದು ಸುಪ್ರೀಂಕೋರ್ಟ್ ಹೇಳಿತು. As the State in not prepared to do so, we don't think we will be justified in punishing only one party to the fraud." ಈ ಮೋಸಕ್ಕೆ ಒಬ್ಬರನ್ನೇ ಶಿಕ್ಷಿಸುವುದಕ್ಕೆ ನಾವು ಇಷ್ಟಪಡುವುದಿಲ್ಲ ಎಂದು ಹೇಳಿದರು. ಮತ್ತೆ ಒಂದು ವಾಕ್ಯವನ್ನು ಹೇಳಿದರು; "This would not be equitable. So even though we strongly decry and condemn the fraud played by the Appellants, the present is not an occasion where any punishment is deserved at the behest of one who is not prepared to punish the main

culprit as the incumbent members of the SSC have to be regarded because but for their active role the appellants would not have succeeded in thier highly objectionable and deplorable act." ಈ ಎಸ್‌ಎಸ್‌ಸಿ ಸದಸ್ಯರ ಸಹಕಾರವಿಲ್ಲದಿದ್ದರೆ ಅವರಿಗೆ ಆ ಸೀಟು ಸಿಗುತ್ತಿರಲಿಲ್ಲ, ಇಂಥ ಕೆಟ್ಟಕೆಲಸ ಮಾಡಿದ್ದರೂ ಕೂಡ ಈ ವಿದ್ಯಾರ್ಥಿಗಳಿಗೆ ಶಿಕ್ಷೆ ಕೊಡುವುದಕ್ಕೆ ಇಷ್ಟಪಡುವುದಿಲ್ಲ. ಎರಡು ಕಾರಣಕೊಡುತ್ತಾರೆ, ಅವರ ಮೇರಿಟ್ ಮೇಲೆ ಆಯ್ಕೆಯಾಗುವುದಕ್ಕೆ ಸಾಧ್ಯವಿತ್ತು, ಎರಡನೆಯದು, ಇವರ ಕೊಲುಷ್ಯನ್, ರಾಜ್ಯಸರ್ಕಾರ ಅವರನ್ನು ಶಿಕ್ಷಿಸುವುದಿಲ್ಲ ವಿದ್ಯಾರ್ಥಿಗಳನ್ನು ಮಾತ್ರ ಶಿಕ್ಷಿಸಿ ಎಂದು ಹೇಳುತ್ತಾರೆ, ಆದುದರಿಂದ ವಿದ್ಯಾರ್ಥಿಗಳನ್ನು ಮುಂದುವರೆಸಿ ಎಂದು ಸುಪ್ರೀಂಕೋರ್ಟ್ ಫೈಂಡಿಂಗ್ ಕೊಡುತ್ತಾರೆ. ಸುಪ್ರೀಂಕೋರ್ಟ್‌ನ ಈ ಫೈಂಡಿಂಗ್ ಬಂದ ನಂತರವೂ ಕೂಡ, ನೀವು ಆದೇ ಅಧಿಕಾರಿಯನ್ನು ಮುಂದುವರೆಸಿದ್ದೀರಿ. ಅವಕಾಶ ಕೊಟ್ಟು ಮಾಡಬಹುದೆಂದು ತಾವು ಹೇಳಿದ್ದೀರಿ ಅದನ್ನೂ ಮಾಡಲಿಲ್ಲ; ಸನ್ಮಾನ್ಯ ರಾಮದಾಸ್‌ರವರು ಹೇಳಿದರು, ನೀವು ಬಾತ್‌ರೂಂಗೆ ಹೋಗಿದ್ದೀರಿ, ಬಂದ ತಕ್ಷಣ ರಿಪೋರ್ಟ್ ಬರೆದಿಟ್ಟಿದ್ದರು ಎಂದು. ಸಹಿಹಾಕಿರುವ ಎಲ್ಲಾ ಸದಸ್ಯರುಗಳೆಲ್ಲಾ ನೋಡಿರುತ್ತಾರಲ್ಲಾ, ಎಲ್ಲಾ ಮುಂದುವರೆಸಿರುತ್ತಾರೆ, ಆದುದರಿಂದ, ಅವರ ಸಿದ್ಧಾಂತವೇನಿತ್ತು ಅದನ್ನು ಸುಪ್ರೀಂಕೋರ್ಟ್ ಒಪ್ಪಿಲ್ಲ. All the members are equally responsible for the fraud, Fraud vitiates everything. ತಮಗೂ ಗೊತ್ತಿದೆ ಒಂದು ಮೋಸ ಮಾಡಿದರೆ ಎಲ್ಲಾ ರೆಕಾರ್ಡ್‌ಗಳು ಹೋಗುತ್ತವೆ. ಈಗ 471 ಜನ ಇರೆಗ್ಯುಲರ್ ಆಗಿ ಅಡ್ಮಿಷನ್ ಆಗಿವೆ, ಆ ಕಾಲೇಜುಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಜವಳಿ ಒಬ್ಬರ ಮೇಲೆ ಕ್ರಮ ತೆಗೆದುಕೊಂಡರು ಸಾಕಾಗುವುದಿಲ್ಲ. 1983ನೇ ಇಸವಿಯಲ್ಲಿ ಜವಳಿಯವರು ಮಾಡಿದರೆಂದು ಇವತ್ತು ಚಾರ್ಜ್‌ಶೀಟ್ ಹಾಕುತ್ತೀರಿ, ಆದರೆ 1983ರ ನಂತರ ಇಷ್ಟೊಂದು ಕಾಲೇಜುಗಳು ಇಷ್ಟೊಂದು ಅನಾಹುತಗಳನ್ನು ಮಾಡಿದ್ದಾರಲ್ಲ ಯಾರ್ಯಾರ ಮೇಲೆ ಕ್ರಮ ತೆಗೆದುಕೊಂಡಿದ್ದೀರಿ? ಶ್ರೀಮತಿ.ಕಾಂತರವರು ವೈಸ್‌ಚಾನ್ಸಲರ್ ಆಗಿ ಹೇಗೆ ಮಾಡಿದಿರಿ, ಈ ವರದಿ ಇದ್ದರೂ ಕೂಡ ಹೇಗೆ ಮಾಡಿದಿರಿ, ಸುಪ್ರೀಂಕೋರ್ಟ್ ಹೇಳಿದರೂ ಕೂಡ ಅವರ ಪ್ರಮೋಷನ್ ಅನ್ನು ಏತಕ್ಕೆ ತೆಗೆದುಕೊಳ್ಳಲಿಲ್ಲ ಎನ್ನುವುದನ್ನು ತಾವು ದಯವಿಟ್ಟು ಹೇಳಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತಿದ್ದೇನೆ.

(ಗೊಂದಲ)

ಉಪಾಧ್ಯಕ್ಷರು: ಇದನ್ನು ರೂಲ್ 69ರ ಅಡಿಯಲ್ಲಿ ತೆಗೆದುಕೊಂಡಿದ್ದು ಒಂದು ಗಂಟೆ ಸಮಯವಿರುವುದು, ಈಗಾಗಲೇ ಒಂದು ಗಂಟೆ ಸಮಯವಾಯಿತು. ಈಗ ನಾವು ಅನೇಕ ವಿಷಯಗಳನ್ನು ಚರ್ಚೆ ಮಾಡುವುದಿದೆ, ವಿಧೇಯಕದ ಮೇಲೆ ಚರ್ಚೆಯಾಗಬೇಕು, ತಾವು ಈ ರೀತಿ ಮಾಡಿದರೆ ನಾವು ಹೇಗೆ ಸದನ ನಡೆಸುವುದು?

ಇದಕ್ಕೆ ಒಂದು ಗಂಟೆ ಸಮಯ ನಿಗಧಿಯಾಗಿದೆ, ಬೇಕಾದರೆ ತಮಗೆ ಓದಿ ಹೇಳುತ್ತೇನೆ. ''ಅಧ್ಯಕ್ಷರು ಒಂದು ವಾರದಲ್ಲಿ ಎರಡು ಉಪವೇಶನಗಳನ್ನು ಅದಕ್ಕಾಗಿಯೇ ಒದಗಿಸಿಕೊಡಬಹುದು ಮತ್ತು ಆ ಉಪವೇಶನದ ಕೊನೆಯಲ್ಲಿ ಅಥವಾ ಮುಂಚೆ ಆ ಸಂದರ್ಭದಲ್ಲಿ ತಾನು ಸೂಕ್ತವೆಂದು ಭಾವಿಸುವಂಥ ಒಂದು ಗಂಟೆಗೆ ಮೀರದಂಥ ಅವಧಿಯನ್ನು ಚರ್ಚೆಗಾಗಿ ಒದಗಿಸಿಕೊಡಬಹುದು.''

ಶ್ರೀ ಕೆ.ಜಯರಾಮಶೆಟ್ಟಿ: ಉಪಾಧ್ಯಕ್ಷರೆ, ನಾನೂ ಕೂಡ ಅದಕ್ಕೆ ಸಹಿ ಮಾಡಿದ್ದೇನೆ.

ಉಪಾಧ್ಯಕ್ಷರು: ತಾವು ಪದೇ ಪದೇ ಆ ರೀತಿಯ ಮಾತನಾಡಿದರೆ ಸಾಧ್ಯವಿಲ್ಲ. ನಾವು ಎಲ್ಲರಿಗೂ ಮಾತನಾಡಲು ಅವಕಾಶ ಮಾಡಿಕೊಡಬೇಕು, ಜಯರಾಮ ಶೆಟ್ಟಿಯವರೇ, ಯಾವಾಗಲೂ ಈ ರೀತಿ ಮಾಡುವುದು ಒಳ್ಳೆಯದಲ್ಲ, ದಯಮಾಡಿ ಕುಳಿತುಕೊಳ್ಳಿ, ಈಶ್ವರಪ್ಪನವರೆ ತಮ್ಮ ಜನರಿಗೆ ತಾವು ಹೇಳಬೇಕು.

ಶ್ರೀ ಕೆ.ಜಯರಾಮಶೆಟ್ಟಿ: ಉಪಾಧ್ಯಕ್ಷರೆ, ನಾವು ಇದರ ಪ್ರಾಮುಖ್ಯತೆಯನ್ನು ನೋಡಿಕೊಂಡೇ ನಾವು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೆವು.

ಶ್ರೀ ಕೆ.ಎಸ್.ಈಶ್ವರಪ್ಪ: ಉಪಾಧ್ಯಕ್ಷರೆ, ಅವರು ಮಾತನಾಡುವುದಕ್ಕೆ ಒಂದೇ ಒಂದು ನಿಮಿಷ ಅವಕಾಶ ಕೊಡಿ.

ಶ್ರೀ ಕೆ.ಜಯರಾಮಶೆಟ್ಟಿ: ಮಾನ್ಯ ಉಪಾಧ್ಯಕ್ಷರೆ, ರಾಜ್ಯದಲ್ಲಿ ಖಾಸಗಿ ಕಾಲೇಜುಗಳು ವಿಶೇಷವಾಗಿ ಉನ್ನತ ಶಿಕ್ಷಣ ಕೊಡುವವರು ವ್ಯಾಪಾರ ಮಾಡುತ್ತಿದ್ದಾರೆ.

ಉಪಾಧ್ಯಕ್ಷರು: ಜಯರಾಮಶೆಟ್ಟಿಯವರು ಏನಾದರೂ ಹೇಳುವುದಿದ್ದರೆ ಒಂದು ನಿಮಿಷದಲ್ಲಿ ಹೇಳಿ, ಸುಪ್ರೀಂಕೋರ್ಟ್ ತೀರ್ಪು, ಹೈಕೋರ್ಟ್‌ನ ತೀರ್ಪನ್ನು ಓದುತ್ತಾ ಕುಳಿತರೆ ಸಮಯವಿಲ್ಲ.

ಶ್ರೀ ಕೆ.ಜಯರಾಮಶೆಟ್ಟಿ (ಉಲ್ಲಾಳ): ಉಪಾಧ್ಯಕ್ಷರೆ ಆ ತಿರ್ಪನ್ನು ಓದುತ್ತಿಲ್ಲ. ನಾನು ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಈ ಬಗ್ಗೆ ರಿಸರ್ವ್ ಬ್ಯಾಂಕಿನ ಅನುಮತಿಯನ್ನು ತೆಗೆದುಕೊಳ್ಳಲಿಲ್ಲ, ಆದುದರಿಂದ ಇದು ಫೆರಾ ಉಲ್ಲಂಘನೆಯಾಗಿದೆ. ಈ ಬಗ್ಗೆ ಈಗಾಗಲೇ ರಾಮದಾಸ್‌ರವರು ಕೇಂದ್ರಸರ್ಕಾರದ ಸಂಬಂಧಿಸಿದ ಇಲಾಖೆಯವರೊಡನೆ ವಿಚಾರ ಮಾಡಿದಾಗ ಇದಕ್ಕೆ ಅನುಮತಿಯನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಆದುದರಿಂದ ಈ ಭ್ರಷ್ಟಾಚಾರದ ಪ್ರಕರಣದಲ್ಲಿ ಮಾನ್ಯ ಮಂತ್ರಿಗಳು ಹಾಗೂ ಜವಾಬ್ದಾರಿಯುತ ಸರ್ಕಾರದ ಅಧಿಕಾರಿಗಳು ಒಳಗೊಂಡಿರುವುದರಿಂದ ಇವರೆಲ್ಲರ ಮೇಲೆ ಕಾನೂನಿನ ಪ್ರಕಾರ ತೆಗೆದುಕೊಳ್ಳಬೇಕು, ಮಾನ್ಯ ಮಂತ್ರಿಗಳು ರಾಜೀನಾಮೆ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ಸಚಿವರು ಮಾತನಾಡುವಾಗ ಎಕ್ಸೆಸ್ ಅಡ್ಮಿಷನ್‌ನ್ನಿನ ಈ ದಂದೆ ಏನಿದೆ ಇದು ಪ್ರಾರಂಭವಾಗಿದ್ದು 1993-94ರಿಂದ ಆಗ ನಾವು ಅಧಿಕಾರದಲ್ಲಿರಲಿಲ್ಲ; ಆಗ ಅಧಿಕಾರದಲ್ಲಿದ್ದವರು ವೀರಪ್ಪ ಮೊಯಿಲಿಯವರು ಎನ್ನುವ ಮಾತನ್ನು ಹೇಳಿದರು ನಾವೇನು ತಮಗೆ ಜ್ಞಾಪಿಸುವುದಕ್ಕೆ ಇಚ್ಛಪಡುತ್ತೇನೆಂದರೆ, ಅದೇ ವಿಷಯದ ಬಗ್ಗೆ ಪ್ರಸ್ತಾಪಿಸುತ್ತಾ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಈ ದಂದೆ ಪ್ರಾರಂಭವಾಗಿದ್ದು 1984ರಿಂದ, ಆಗ ಯಾರು ಆರೋಗ್ಯ ಸಚಿವರಾಗಿದ್ದರು ಎನ್ನುವುದು ನನಗೆ ಗೊತ್ತಿಲ್ಲವೆನ್ನುವ ಮಾತನ್ನು ಹೇಳಿದರು. ನಾನೇನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆಂದರೆ, 1984ರಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರಲಿಲ್ಲ, ಆಗ ಕಾಂಗ್ರೆಸ್ ಪಕ್ಷದವರ್ಯಾರು, ಆರೋಗ್ಯ ಸಚಿವರಾಗಿರಲಿಲ್ಲ, ಆಗ ಅಧಿಕಾರದಲ್ಲಿದವರು ತಾವೇ, ಇವತ್ತು ತಮ್ಮ ಕಾಲದಲ್ಲೇ ಮುಂದುವರೆದುಕೊಂಡು ಬಂದಿದೆ. ದಯಮಾಡಿ, ಆಗ ಯಾರಿದ್ದವರು, ಇದು ಪ್ರಾರಂಭವಾಗುವುದಕ್ಕೆ ಯಾರದು ಅಸ್ತಿಭಾರವನ್ನು ಹಾಕಿದರು ಎನ್ನುವುದನ್ನು ತಾವು ಆ ಎಲ್ಲಾ ಮಾಹಿತಿಯನ್ನು ಕೊಡುವ ಸಂದರ್ಭದಲ್ಲಿ ಕೊಡಬೇಕು. ಏಕೆಂದರೆ, ಈಗ ಸುಪ್ರೀಂಕೋರ್ಟ್ ತೀರ್ಪಾಗಲಿ ಅಥವಾ ಲೋಕಾಯುಕ್ತದಲ್ಲಾಗಲಿ ಪ್ರಸ್ತಾಪವಾಗಿರತಕ್ಕಂಥದ್ದು 1993-94ರ ಬಗ್ಗೆ. ಇಂಥ ವಿಷಯದಲ್ಲಿ ಯಾರು ಅಸ್ತಿಭಾರವನ್ನು ಹಾಕಿದರೆನ್ನುವುದು ಸದನಕ್ಕೆ ಗೊತ್ತಾಗಬೇಕಾದರೆ, ಯಾವ ಪಕ್ಷದವರು ಏನು ನಿಲುವು ಎನ್ನುವುದು ಗೊತ್ತಾಗಬೇಕಾದರೆ ದಯವಿಟ್ಟು ಸಂಪೂರ್ಣ ಮಾಹಿತಿಯನ್ನು ಕೊಟ್ಟರೆ ಸಹಾಯವಾಗುತ್ತದೆನ್ನುವ ದೃಷ್ಟಿಯಿಂದ ನಾನು ಒಂದು ಮಾತನ್ನು ಹೇಳಿದೆ.

1.30 ಪಿಎಂ

ಶ್ರೀ ಕೆ.ಎಸ್.ಈಶ್ವರಪ್ಪ: ಅಸ್ಥಿಭಾರ ಹಾಕಿದ್ದು ಜನತಾ ದಳದವರೇ. ಬಿಲ್ಡಿಂಗ್ ಕಟ್ಟಿದ್ದು ತಾವು. ಮತ್ತೆ ಕಳಸ ಇಡುವುದಕ್ಕೆ ಹೊರಟಿರುವುದು ಅವರೇ.

ಶ್ರೀ ಟಿ.ಬಿ.ಜಯಚಂದ್ರ: ಅಸ್ಥಿಭಾರ ಯಾರು ಹಾಕಿದರು. ಬಿಲ್ಡಿಂಗ್ ಯಾರು ಕಟ್ಟಿದರು, ಏನಾಯಿತು ಎಂಬುದು ಗೊತ್ತಾಗುತ್ತದೆ. ನೀವು ಅಸ್ಥಿಭಾರ ಹಾಕುವವರೂ ಅಲ್ಲ, ಬಿಲ್ಡಿಂಗ್ ಕಟ್ಟುವವರೂ ಅಲ್ಲ. ಕಳಸ ಇಡುವವರೂ ಅಲ್ಲ.

+ ಡಾ: ಶಂಕರನಾಯಕ್ (ವೈದ್ಯಕೀಯ ಶಿಕ್ಷಣ ಸಚಿವರು): ಇದಕ್ಕೆ ಯಾರು ಅಸ್ಥಿಭಾರ ಹಾಕಿದರು, ಯಾರು ಕಟ್ಟಿದರು, ಯಾರು ಬೀಳಿಸಿದರು ಎನ್ನುವ ಪ್ರಶ್ನೆ ಅಲ್ಲ. ನಾನು ಹೇಳತಕ್ಕಂಥಾದ್ದು, ಮಾನ್ಯ ಸದಸ್ಯರು ಏನು ಹೇಳಿದ್ದಾರೆ, 1983ನೇ ಇಸವಿಯಿಂದ 1995-96ನೇ ಇಸವಿಯವರೆಗೆ ನಡೆದಿರತಕ್ಕಂಥ ಹಗರಣದ ಬಗ್ಗೆ ಅನೇಕ ಸದಸ್ಯರು ಈಗ ಗಮನ ಸೆಳೆದಿದ್ದಾರೆ. ತಮ್ಮ ಗಮನಕ್ಕೆ ನಾನು ತರುವುದೇನೆಂದರೆ ಪಟೇಲರ ಸರ್ಕಾರ ಬಂದಮೇಲೆ ಯಾವುದೇ ಹಗರಣ ನಡೆದಿಲ್ಲ. ನಾನು ಮಾನ್ಯ ಪಟೇಲರ

ಸರ್ಕಾರದಲ್ಲಿ ಮಂತ್ರಿಯಾಗಿರುವುದು. ಮಾನ್ಯ ರಾಮದಾಸ್‌ರವರು ಏನು ಇದರ ಬಗ್ಗೆ ಅನೇಕ ಬಾರಿ ಸದನದಲ್ಲಿ ಚರ್ಚೆ ಮಾಡಿದ್ದಾರೆ, ನಾನೂ ಸಹ ಆಗ ವಿಧಾನಸಭೆ ಸದಸ್ಯನಾಗಿದ್ದೆ. ಆಗ ಸಹ ಅನೇಕ ಸಾರಿ ಇದರ ಬಗ್ಗೆ ಚರ್ಚೆಯಾಗಿದೆ ಮತ್ತು ತೀರ್ಮಾನಗಳು ಆಗಿವೆ. ನಾನು ಇಲ್ಲಿ ಯಾರನ್ನು ರಕ್ಷಣೆ ಮಾಡಬೇಕು ಎನ್ನುವ ವಿಷಯ ಇಲ್ಲ. ಇವತ್ತು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುವುದೇನೆಂದರೆ, ಅವರೇನು ಇಷ್ಟೊತ್ತು ಬ್ಯಾಕ್‌ಲಾಗ್ ಸೀಟು ಮತ್ತು ಎಕ್ಸ್‌ಸ್ ಸೀಟುಗಳು ಬಗ್ಗೆ ಹೇಳಿದರು, ನಾನು ಮಂತ್ರಿಯಾಗಿರುವುದು ಜೂನ್ ತಿಂಗಳ 1996ನೇ ಇಸವಿ 5ನೇ ತಾರೀಖಿನಿಂದ. ಮೊಟ್ಟಮೊದಲನೆಯಾಗಿ ಕ್ಯಾಬಿನೇಟ್ ಮೀಟಿಂಗ್‌ನಲ್ಲಿ ಬ್ಯಾಕ್‌ಲಾಗ್ ಅಡ್ಮಿಷನ್ ಏನು ಮಾಡುತ್ತಿದ್ದರು, ಅದು ಸರಿಯಿಲ್ಲ ಎಂದು ಸರ್ಕಾರದಿಂದ ಸುತ್ತೋಲೆ ಹೊರಡಿಸಿ ಅಂದಿನಿಂದ ಬ್ಯಾಕ್‌ಲಾಗ್ ಅಡ್ಮಿಷನ್ ಸ್ಟಾಪ್ ಮಾಡಿದ್ದೇವೆ. ಈ ಹಿಂದೆ ಟ್ರಾನ್ಸ್‌ಫರ್ ಆಗಿರತಕ್ಕಂಥ, ಸತ್ತುಹೋಗಿರತಕ್ಕಂಥ ವಿದ್ಯಾರ್ಥಿಗಳ ಲೆಕ್ಕ ಕೊಟ್ಟು ಬ್ಯಾಕ್‌ಲಾಗ್ ಅಡ್ಮಿಷನ್ ಬಗ್ಗೆ ಏನು ಇಷ್ಟೊತ್ತು ಹೇಳಿದ್ದಾರೆ ಅದರ ಬಗ್ಗೆ ನಮ್ಮ ಮಂತ್ರಿಮಂಡಲ ಬಂದಾಗ ಮೊದಲನೆ ಸಭೆಯಲ್ಲಿ ಬ್ಯಾಕ್‌ಲಾಗ್ ಅಡ್ಮಿಷನ್ ಕೊಡುವುದಿಲ್ಲವೆಂದು ಸರ್ಕ್ಯೂಲರ್ ಹೊರಡಿಸಿ ಅಂದಿನಿಂದ ನಿಲ್ಲಿಸಿದ್ದೇವೆ. ಈವರೆಗೆ ಒಂದೂ ಅಡ್ಮಿಷನ್ ನಾವು ಬಂದಮೇಲೆ ಆಗಿಲ್ಲ. ಇದನ್ನೂ ಸಹ ನಾವು ಬರುಕಾರವವರ ಮುಂದೆ ಕೇಸ್ ನಡೆಯುವಾಗ ನಾವು ಕೋರ್ಟ್ ಮುಂದೆ ಹೇಳಿಕೆಯನ್ನು ಕೊಟ್ಟಿದ್ದೇವೆ, ಇನ್ನು ಮುಂದೆ ಸರ್ಕಾರ ಬ್ಯಾಕ್‌ಲಾಗ್ ಅಡ್ಮಿಷನ್ ಎಂಟರ್‌ಟೇನ್ ಮಾಡುವುದಿಲ್ಲವೆಂದು. ಇವತ್ತು ಇದು ನನ್ನ ಗಮನಕ್ಕೆ ಬಂದಿದ್ದು 11 ಗಂಟೆಗೆ. ಇದುವರೆಗೂ ನನಗೆ ಅದರ ಬಗ್ಗೆ ಗೊತ್ತಿರಲಿಲ್ಲ. ಅವರು ಹೇಳಿದಾಗ ಅದರ ಕಡತಗಳನ್ನು 1983ನೇ ಇಸವಿಯಿಂದ ಅದಕ್ಕೆ ಸುಪ್ರೀಂಕೋರ್ಟ್‌ನಲ್ಲಿ ಏನಾಗಿದೆ? ಹೈಕೋರ್ಟ್‌ನಲ್ಲಿ ಏನಾಗಿದೆ, ಸಂತೋಷ ಹೆಗಡೆಯವರು ಏನು ತೀರ್ಮಾನ ಮಾಡಿದ್ದಾರೆಂದು ನೋಡುವುದಕ್ಕೆ ತರಿಸಬೇಕು. ಅದಕ್ಕೆ ಸಮಯ ಕೇಳಿದ್ದೇನೆ. ಇಲ್ಲಿ ಯಾರನ್ನೇ ಎಲಿವೇಷನ್ ಮಾಡಬೇಕು, ಯಾರನ್ನು ವಿಚಾರಣೆಯಿಂದ ಬಿಡಬೇಕಾದಂತಹ ಕ್ರಮವನ್ನು ನಾವು ಬಂದಮೇಲೆ ತೆಗೆದುಕೊಂಡಿಲ್ಲ. ಅದರ ಬಗ್ಗೆ ಮಾಹಿತಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ 1983 ರಿಂದ 1998ನೇ ಇಸವಿಯವರೆಗೆ ಅನೇಕ ಸರ್ಕಾರಗಳು ಬಂದು ಅನೇಕ ಸರ್ಕಾರಗಳು ಹೋದವು. ಅದರ ಬಗ್ಗೆ ಏನೆಂದು ನನಗೆ ಗೊತ್ತಿಲ್ಲ. ಆದರೆ ಅವರು ಹೇಳತಕ್ಕಂಥ ವಿಚಾರಣೆ ಹಿಂದೆ ಡಿ.ಎಂ.ಎ ಆಗಿರತಕ್ಕಂಥ ಕಾಂತಾ ಅವರ ಬಗ್ಗೆ ವಿಚಾರಣೆಗೆ ಗುರಿ ಮಾಡಿರಲಿಲ್ಲ. ಈಗ ಅವರನ್ನು ಲೋಕಾಯುಕ್ತದ ಮುಂದೆ ವಿಚಾರಣೆಗೆ ಗುರಿ ಮಾಡಿ ಅದರ ಬಗ್ಗೆ ವರದಿ ಬಂದಿದೆ. ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಇದೆ. ನಾನು ಅದನ್ನೆಲ್ಲಾ ಸಮಯ ಕೊಟ್ಟರೆ ನಾಳೆ ಬೆಳಿಗ್ಗೆ ಅಥವಾ ಇವತ್ತು ಸಾಯಂಕಾಲ ಕೂಲಂಕಷವಾಗಿ ಉತ್ತರವನ್ನು ಕೊಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷರೇ, ಅದರಲ್ಲಿ ಏನೂ ಅನುಮಾನ ಇಲ್ಲ. ನಾನು ಏನು ಕೇಳುವುದಕ್ಕೆ ಹೊರಟ್ಟಿದ್ದೇನೆಂದರೆ 1994-95ನೇ ಸಾಲಿನಲ್ಲಿ 175 ಸೀಟು ಜಾಸ್ತಿ ಆಗಿದ್ದು ಇವರ ಕಾಲದಲ್ಲಿ. 1995-96ರಲ್ಲಿ 143 ಸೀಟು ಜಾಸ್ತಿಯಾಗಿದ್ದು ಇವರ ಕಾಲದಲ್ಲಿ. ಹಾಗಾಗಿ ಇವರು ನುಣುಚಿಕೊಳ್ಳುವುದಕ್ಕೆ ಬರುವುದಿಲ್ಲ. ಇವರ ಕಾಲದಲ್ಲಿ ಜಡ್ಜ್‌ಮೆಂಟ್ ಬಂದಿರುವುದು. ಇವರ ಕಾಲದಲ್ಲೇ ಹೈಕೋರ್ಟ್, ಸುಪ್ರೀಂಕೋರ್ಟ್ ಎರಡೂ ಅವರ ಬಗ್ಗೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿರುವುದು. ಇಲ್ಲಿ ಪ್ರಶ್ನೆ ಬಂದಿರುವುದು ಏಕೆಂದರೆ ಎಲ್ಲೋ ನುಣುಚಿಕೊಳ್ಳುವುದಕ್ಕೆ ಹೋಗಬೇಡಿ. ಆಯಿತು, ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಕೇಳಿಕೊಳ್ಳಿ. ಆ 120 ಕೋಟಿ ರೂಪಾಯಿ ಎಲ್ಲೆಲ್ಲಿ ಹೋಗಿದೆ ಎನ್ನುವ ವಿಚಾರ ಸ್ಪಷ್ಟವಾಗಿ ಬರಲಿ. ಆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳೂ ಕೂಡ ಸುಪ್ರೀಂಕೋರ್ಟ್ ಜಡ್ಜ್‌ಮೆಂಟ್‌ನಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಮೇಲೆ ಇವರು ಈ ಮಾತು ಹೇಳುತ್ತಾರೆಂದು ತಿಳಿದುಕೊಂಡಿದ್ದೆ. ಇವರು ಹೇಳುತ್ತಿರುವುದು, ನಾನು ತರಿಸುತ್ತೇನೆ, ನೋಡುತ್ತೇನೆ ಎಂದು. ತರಿಸಿ, ನೋಡಿ ಕ್ರಮ ತೆಗೆದುಕೊಳ್ಳಿ. ಜೊತೆಗೆ ನೀವೂ ರಾಜೀನಾಮೆ ಕೊಡಿ.

ಶ್ರೀ ಎ.ರಾಮದಾಸ್: ಮಾನ್ಯ ಉಪಾಧ್ಯಕ್ಷರೇ, ಕಡತಕ್ಕೆ ತಪ್ಪು ಹೋಗಬಾರದು ಎನ್ನುವ ಒಂದೇ ಒಂದು ಕಾರಣಕ್ಕೆ ಒಂದು ಮಾಹಿತಿಯನ್ನು ಕೊಡುತ್ತಿದ್ದೇನೆ. 1995-96ನೇ ಇಸವಿಯಲ್ಲಿ 143 ಸೀಟುಗಳನ್ನು ಕೊಟ್ಟಿದ್ದು ಇವರ ಕಾಲದಲ್ಲೇ. ಅದಕ್ಕೆ ಸಂಬಂಧಪಟ್ಟ ದಾಖಾಲಾತಿಗಳು ಇದೆ. 143 ಸೀಟುಗಳನ್ನು ಮಾನ್ಯ ಶಂಕರ್‌ನಾಯಕ್‌ರವರು ಸಚಿವರಾಗಿದ್ದಾಗ ಕೊಟ್ಟಿದ್ದುದು.

ಉಪಾಧ್ಯಕ್ಷರು: ಹೇಳಿದ್ದನ್ನೇ ಹೇಳಬಾರದು.

ಶ್ರೀ ಎ.ರಾಮದಾಸ್: ಇದು ಹೇಳುವಂತಹ ವಿಚಾರ. ಬಹಳ ಪ್ರಾಮುಖ್ಯವಾದಂತಹ ವಿಚಾರ. ತಪ್ಪುದಾರಿಗೆ ಎಳೆಯಬಾರದು. ಪ್ರಮೋಷನ್ ಎರಡು ಸಲ ಕೊಟ್ಟಿದ್ದೂ ಇವರೇ.

ಉಪಾಧ್ಯಕ್ಷರು: ಅವರು ಹೇಳಿದ್ದಾರೆ, ನೀವು ಹೇಳಿದ್ದನ್ನು ಎಷ್ಟು ಸಾರಿ ಹೇಳುವುದು?

ಡಾ: ಎಂ.ಶಂಕರನಾಯಕ್: ಮಾನ್ಯ ಉಪಾಧ್ಯಕ್ಷರೇ, ಯಾವಾಗ ಪ್ರಮೋಷನ್ ಸಿಕ್ಕಿದ್ದು, ಯಾವಾಗ ಸೀಟುಗಳನ್ನು ಕೊಟ್ಟರು, ಯಾವಾಗ ಸುತ್ತೋಲೆಗಳನ್ನು ಹೊರಡಿಸಿದರು ಎನ್ನುವ ಅಂಕಿಅಂಶಗಳನ್ನು ಕೊಡುತ್ತೇನೆಂದು ಹೇಳಿದ್ದೇನೆ. ಇದರಲ್ಲಿ ಏನೂ ಮುಚ್ಚುಮರೆ ಇಲ್ಲ. ನನ್ನದು ತಪ್ಪಾಗಿದ್ದರೆ ನಾನು ರಾಜೀನಾಮೆ ಕೊಡುವುದಕ್ಕೆ ತಯಾರಿದ್ದೇನೆ. ಅದರಲ್ಲೇನು ಅನುಮಾನ ಇಟ್ಟುಕೊಳ್ಳಬೇಡಿ. ನಾವೇನಾದರೂ ತಪ್ಪು ಮಾಡಿದ್ದರೆ ಅದಕ್ಕೆ ನಾವು ಭಾಗಿಯಾಗುತ್ತೇವೆಂದು ಒಪ್ಪಿಕೊಳ್ಳುತ್ತೇನೆ. ಅದರಲ್ಲಿ

ಅನುಮಾನ ಬೇಡ. ಆದರೆ ಹಿಂದಿನಿಂದ ಆಗಿರತಕ್ಕಂಥಾದ್ದರ ಅಂಕಿಅಂಶಗಳ ಬಗ್ಗೆ ನಾನು ಹಿಂದಿನ ಕಡತಗಳನ್ನು ತರಿಸಬೇಕಾಗುತ್ತದೆ. 1983 ರಿಂದ 1996ರವರೆಗೆ ಏನಾಯಿತು ಎಂದು ತರಿಸಿ ನೋಡಿದಮೇಲೆ ಯಾವಾಗ ಸೀಟುಗಳನ್ನು ಕೊಟ್ಟರು, ಯಾವಾಗ ಅವರಿಗೆ ಪ್ರಮೋಷನ್ ಆಯಿತು? ಎಲ್ಲಾ ವಿಷಯಗಳ ಬಗ್ಗೆ ನಾಳೆ ಉತ್ತರ ಕೊಡುತ್ತೇನೆ.

ಉಪಾಧ್ಯಕ್ಷರು: ಈಗ ಸದನವನ್ನು ಒಂದು ಗಂಟೆ ಕಾಲ ಮುಂದೂಡುತ್ತಿದ್ದೇನೆ. ಮತ್ತೆ ಸದನವು 2-30ಕ್ಕೆ ಪುನಃ ಸಮಾವೇಶಗೊಳ್ಳುವುದು.

(ಸದನವು 1 ಗಂಟೆ 35 ನಿಮಿಷಕ್ಕೆ ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 2 ಗಂಟೆ 30 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ: 3.10ಕ್ಕೆ ಸಮಾವೇಶಗೊಂಡಿತು, ಉಪಾಧ್ಯಕ್ಷರು (ಶ್ರೀ ಚಂದ್ರಶೇಖರ ಎಂ.ಮಾಮನಿ) ಯವರು ಪೀಠವನ್ನು ಅಲಂಕರಿಸಿದರು).

ಉಪಾಧ್ಯಕ್ಷರು: ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ ರಾಮಸ್ವಾಮಿಯವರೇ, ತಮ್ಮ ವಿಷಯವನ್ನು ಪ್ರಾರಂಭ ಮಾಡಿ.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಉಪಾಧ್ಯಕ್ಷರೆ, ನೋಡಿ ಕೇವಲ ಇಬ್ಬರು ಸಚಿವರು ಮಾತ್ರ ಇದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ಉಪಾಧ್ಯಕ್ಷರೇ, ಕೋರಮ್ ಆಗುವಷ್ಟು ಜನ ಬರುವುದಕ್ಕಾದರೂ ಅವರಿಗೆ ಏನು ತೊಂದರೆಯಾಗಿದೆ? ಒಂದು ಸಾರಿ ನೀವು ಪುಲ್‌ಅಫ್ ಮಾಡಬೇಕು. ಕನಿಷ್ಟ 23 ಜನ ಇರಬಾರದು ಎಂದರೆ ಏನು ಅರ್ಥ? ನೀವು ಅವರಿಗೆ ಒಂದು ಸಲ ಪುಟ್‌ಅಫ್ ಮಾಡದೇ ಹೋದರೆ ಯಾರಿಗೂ ಗೌರವ ಬರುವುದಿಲ್ಲ. ಅವರು 120 ಜನ ಇದ್ದಾರೆ ನಾವು 120 ಜನರು ಬರಬೇಕೆಂದು ಕೇಳುತ್ತೇವಾ? ಕೇವಲ 8-10 ಜನ ಇದ್ದರೆ ಇದಕ್ಕೆ ಏನು ಅರ್ಥ? ನೀವು ಅವರಿಗೆ ಒಂದು ಸಲ ನಿಮ್ಮ ಭಾಷೆಯಲ್ಲಿ ಯಾವ ರೀತಿ ಹೇಳಬೇಕೋ ಆ ರೀತಿ ಹೇಳಬೇಕು. ನಾವು ಸದನಕ್ಕೆ ಬರುವುದಕ್ಕೆ ಏತಕ್ಕೆ? ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡಿ ಸದನ ಸೇರುವುದಕ್ಕಾದರೂ ಏಕೆ?

(ಗೊಂದಲ)

ಉಪಾಧ್ಯಕ್ಷರು: ನಾವು ಎಲ್ಲರಿಗೂ ಹೇಳಿದ್ದೇವೆ, ಎಲ್ಲರೂ ಈ ಸದನಕ್ಕೆ ಸರಿಯಾಗಿ ಬರಬೇಕು.

ಶ್ರೀ ಎಸ್.ಸುರೇಶ್‌ಕುಮಾರ್: ಹಿರಿಯ ಸಚಿವರಾದ ಶ್ರೀ ಎಂ.ಪಿ.ಪ್ರಕಾಶ್‌ರವರು ಇದ್ದಾರೆ, ಅವರನ್ನು ನಾವು ಕೇಳುತ್ತೇನೆ ಸದನಕ್ಕೆ ಬರುವುದಕ್ಕೆ ಏನಾಗಿದೆ ಸರ್?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಎಂ.ಪಿ.ಪ್ರಕಾಶ್‌ರವರ ಬಗೆ ನಮಗೆ ಗೌರವ ಇದೆ. ಅವರು ನಮಗೆ ಸತ್ಯವನ್ನು ಹೇಳುತ್ತಾರೆಂದು ನಂಬಿಕೆ ಇದೆ.

(ಗೊಂದಲ)

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಮುಖ್ಯಮಂತ್ರಿಗಳಿಗೆ ಹುಷಾರ್ ಇಲ್ಲವೆಂದು ಅವರು ಎಲ್ಲಾ ಲೀಡರ್‌ಗಳನ್ನು ಕರೆಸಿ ಮಾತನಾಡಿ ಅವರು ಸೌಜನ್ಯದಿಂದ ಕನ್‌ಸಲ್ಟ್ ಮಾಡಿ ಇವತ್ತಿನ ದಿವಸ ಆಸ್ಪತ್ರೆಯನ್ನು ಸೇರಿದ್ದಾರೆ. ಆದರೆ ಇದ್ದವರು ಸದನಕ್ಕೆ ಬಂದಿಲ್ಲವೆಂದರೆ ಏನು ಅರ್ಥ?

ಉಪಾಧ್ಯಕ್ಷರು: ಆಡಳಿತ ಪಕ್ಷದವರು ಮತ್ತು ವಿರೋಧ ಪಕ್ಷದವರು ಎಲ್ಲರು ಕಡಿಮೆ ಇದ್ದಾರೆ. ಇದು ಅಕ್ಬರ್ ಮತ್ತು ಬೀರಬಲ್‌ರ ಕತೆಯಾಗಿದೆ. ಎಲ್ಲರಿಗೂ ಒಂದೊಂದು ಚರಿಗೆ ಹಾಲು ಹಾಕಲು ಹೇಳಿದನಂತೆ ಬೀರಬಿಲ್. ಒಬ್ಬರು ಒಂದು ಚರಿಗೆ ನೀರು ಹಾಕಿದರೆ ಏನಾಗುತ್ತದೆಂದು ಎಲ್ಲರೂ ನೀರು ಹಾಕಿದರಂತೆ. ಈ ಸದನದಲ್ಲಿ ಈಗ ಆ ರೀತಿ ಆಗಿದೆ. ಎಲ್ಲರೂ ನೀರು ಹಾಕುವುದು ಬೇಡ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಈ ಸದನವನ್ನು ನಡೆಸತಕ್ಕಂಥ ಜವಾಬ್ದಾರಿ ಅವರ ಮೇಲೆ ಇರುತ್ತದೆ. ನಮ್ಮ ಮೇಲೆ ಅಲ್ಲ.

ಶ್ರೀ ಸಿ.ಆರ್.ಸಗೀರ್ ಅಹಮದ್: ಅವರು ನೀರು ಹಾಕುತ್ತಾರೆಂದರೆ, ನಾವು ನೀರು ಹಾಕುವುದಾ?

(ಗೊಂದಲ)

ಉಪಾಧ್ಯಕ್ಷರು: ರಾಮಸ್ವಾಮಿಯವರೇ, ತಾವು ಪ್ರಾರಂಭ ಮಾಡಿ. ಮಂತ್ರಿಗಳಿದ್ದಾರೆ ಅವರು ಬರೆದುಕೊಳ್ಳುತ್ತಾರೆ, ಅವರು ಉತ್ತರವನ್ನು ಹೇಳುತ್ತಾರೆ. ಕೋರಮ್ ಇದ್ದರೆ ನಾವು ಸದನವನ್ನು ನಡೆಸಬೇಕಾಗುತ್ತದೆ. ಅವರು ಹಾಗೆಯೇ ನೀವು ಹಾಗೆಯೇ ಏನು ಮಾಡುವುದಕ್ಕಾಗುತ್ತದೆ.

ಶ್ರೀ ಸಿ.ಆರ್.ಸಗೀರ್ ಅಹಮದ್: ಉಪಾಧ್ಯಕ್ಷರೆ, ನಮ್ಮ ಕೈಗೆ ಅವಕಾಶ ಕೊಟ್ಟು ನೋಡಿ. ನಾವು ಹೇಗೆ ನಡೆಸುತ್ತೇವೆ.